ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಸಿಂದಗಿ

ಕ್ರಿಮಿನಲ್ ಕೇಸ್ ನಂ. 743 /2019

ಸಿ.ಡಬ್ಲೂ:1 ಪಿ.ಡಬ್ಲೂ:2

ಸಾಕ್ಷಿಗೆ ದಿನಾಂಕ ಃ- 03/ 08 /2023 ರಂದು ಪ್ರಮಾಣಿಕರಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಗೀತಾ ಬಿಸೆ |
| ತಂ/ಗಂ. ಹೆಸರು | ಮಾರುತಿ |
| ವಯಸ್ಸು | 32 ವರ್ಷ |
| ಉದ್ಯೋಗ | ವ್ಯಾಪಾರ |
| ವಾಸಸ್ಥಳ | ಸಿಂದಗಿ |

ಮುಖ್ಯ ವಿಚಾರಣೆ ಃ ಶ್ರೀ ಎಪಿಪಿ ಯವರಿಂದ

ಚಾಸಾ-4 ನನ್ನ ಸಂಬಂಧಿಕ. ಚಾಸಾ-5 ನನ್ನ ಮಗ. ಚಾಸಾ-6 ನನ್ನ ಅತ್ತಿ. ಚಾಸಾ-7 ನನ್ನ ಸಂಬಂಧಿ. ನನ್ನ ಕುಟುಂಬದಲ್ಲಿ ನಾನು ನನ್ನ ಅತ್ತೆ ಮಕ್ಕಳು ಇದ್ದೇವೆ. ಅವರೆಂದರೆ ಭರತ, ಪ್ರಿಯಾಂಕ, ಸ್ವಾತಿ ಮತ್ತು ಪ್ರಶಾಂತ ಅಂತ ಇರುತ್ತಾರೆ.

ದಿನಾಂಕ.29.07.2019 ರಂದು ನಾನು, ನನ್ನ ಗಂಡ ಮಕ್ಕಳೊಂದಿಗೆ ಶಿವಣಗಿ ಗ್ರಾಮದ ಅಂಬಾಭವಾನಿ ದೇವಸ್ಥಾನಕ್ಕೆ ಹೋಗಿದ್ದೆವು. ಟಾಟಾ ಏಸ್ ವಾಹನವನ್ನು ಚಾಸಾ-4 ಚಲಾಯಿಸುತ್ತಿದ್ದ. ದೇವಸ್ಥಾನದಿಂದ ಮರಳಿ ಬರುತ್ತಿದ್ದಾಗ ಇನ್ನು ದೇವರ ಹಿಪ್ಪರಗಿ 4 ಕಿ ಮೀ ಅಂತರದಲ್ಲಿ ಇದ್ದಾಗ ಮೂತ್ರವಿಸರ್ಜನೆಗಾಗಿ ನನ್ನ ಗಂಡ ಹೋಗಿದ್ದ ಸದರಿ ವಾಹನವನ್ನು ರಸ್ತೆಯ ಪಕ್ಕದಲ್ಲಿ ನಿಲ್ಲಿಸಿ ನಿಲುಗಡೆ ಕುರಿತು ಇಂಡಿಕೇಟರ್ ಹಾಕಲಾಗಿತ್ತು. ಒಬ್ಬ ಸೈಕಲ್ ಮೋಟಾರ ಸವಾರ ತನ್ನ ಮೋಟಾರ ಸೈಕಲ್ ಅತಿವೇಗವಾಗಿ ಚಾಲನೆ ಮಾಡಿಕೊಂಡು ಬಂದು ಮಳೆ ಬರಲು ಪ್ರಾರಂಬಿಸಿದ್ದರಿಂದ ಸದರಿ ವಾಹನದ ಪಕ್ಕದಲ್ಲಿ ಅಳವಡಿಸಿದ ಬಟ್ಟೆ ಹಾಕಲು ನಿಂತಾಗ ಆರೋಪಿ ಜೋರಾಗಿ ಬಂದು ನನ್ನ ಗಂಡನಿಗೆ ಹಾಯಿಸಿಬಿಟ್ಟ. ನಂತರ ಮುಂದೆಹೋಗಿ ಆರೋಪಿ ತನ್ನ ಮೋಟಾರ ಸೈಕಲ್ ಜೊತೆಗೆ ಕೆಳಗಡೆ ಬಿದ್ದಿರುತ್ತಾನೆ.

ನನ್ನ ಗಂಡನಿಗೆ ಆತನ ಕಿವಿ ಇಂದ ರಕ್ತ s'uೀರುತ್ತಿತ್ತು ಮೊಳಕಾಲು ಮತ್ತು ಇತರ ಕಡೆ ತ್ರಿವ್ರ ಗಾಯವಾಗಿ ಸ್ಥಳದಲ್ಲಿ ಮೃತಪಟ್ಟಿದ್ದ. ಸದರಿ ಮೋಟಾರ ಸೈಕಲ್ ಸವರಾನನ್ನು ನೋಡಿದ್ದು ಆತನನ್ನು ಎಬ್ಬಿಸಿ ನಂತರ ಅಂಬುಲೆನ್ಸ ಮೂಲಕ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದು ಇರುತ್ತದೆ. ನಾನು ಆರೋಪಿಗೆ ತನ್ನ ಹೆಸರು ಕೇಳಲು ಆತ ದಾವಲಸಾಬ ತಾಳಿಕೋಟಿ ಎಂದು

ಹೇಳಿರುತ್ತಾನೆ. ಸದರಿ ಮೋಟಾರ ಸೈಕಲ್ ನ ನಂ. ಕೆಎ 28 ಅಂತಾ ಇದ್ದು 4 ವರ್ಷ ಆಗಿದ್ದರಿಂದ ಸಂಪೂರ್ಣ ನೆನಪಿಲ್ಲ ಎಂದು ಹೇಳುತ್ತಾರೆ. ಅಪಘಾತವಾದಾಗ ರಾತ್ರಿ 10.30 ಗಂಟೆ ಆಗಿತ್ತು. ಆರೋಪಿತನನ್ನು ಅಂಬುಲೆನ್ಸ ಮೂಲಕ ವಿಜಯಪುರದ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿತ್ತು. ನನ್ನ ಗಂಡನನ್ನು ಸಿಂದಗಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು ಇರುತ್ತದೆ. ನಾನು ಹೇಳಿದಂತೆ ಕಾಂಬಳೆ ಅನ್ನುವವರು ದೂರನ್ನು ಬರೆದಿರುತ್ತಾರೆ. ದೂರನ್ನು ಸಿಂದಗಿ ಪೊಲೀಸ್ ಠಾಣೆಯಲ್ಲಿ ನೀಡಿರುತ್ತೇವೆ.

ಸಿಂದಗಿ ಆಸ್ಪತ್ರೆಯ ಶವಾಗಾರದಲ್ಲಿ ದಾಖಲೆ ಮೇಲೆ ಬರೆದುಕೊಂಡು ನಂತರ ಪೊಟೋ ತೆಗೆದಿರುತ್ತಾರೆ. ಅಪಘಾತ ಆಗುವ ಸಮಯದಲ್ಲಿ ನಾನು ನನ್ನ ಗಂಡನ ಪಕ್ಕದಲ್ಲಿ ನಿಂತಿದ್ದೆ. ನ್ಯಾಯಾಲಯದಲ್ಲಿ ಇದ್ದ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ9 ಎಂದು ಗುರುತಿಸಲಾಯಿತು. ನಿಪಿ9 ರಲ್ಲಿನ ತನ್ನ 2 ಸಹಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ9 ಎ ಮತ್ತು 9 ಬಿ ಎಂದು ಗುರುತಿಸಲಾಯಿತು. ಶವಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ಈಗಾಗಲೆ ನಿಪಿ1 ಮತ್ತು ಭಾವ ಚಿತ್ರ ಗುರುತಿಸಿದ್ದು ಅದನ್ನು ಈಗಾಗಲೆ ನಿಪಿ2 ಎಂದು ಗುರುತಿಸಲಾಗಿದೆ.

<u>ಮಾನ್ಯ ಎ ಪಿ ಪಿ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದರು ಅನಮತಿ ನೀಡಲಾಯಿತು.</u>

<u>ಪಾಟೀಸವಾಲು ಃ ಮಾನ್ಯ ಎ ಪಿ ಪಿ ರವರಿಂದ ಃ</u>

ಅಪಘಾತವಾದಾಗ ಸಮಯ ರಾತ್ರಿ 11.30 ಗಂಟೆ ಆಗಿತ್ತು ಎಂದರೆ ನಿಜ. ಸದರಿ ನಾವು ಹೋಗುತ್ತಿದ್ದ ಟಾಟಾ ಏಸ್ ವಾಹನದ ಸಂಖ್ಯೆ. ಕೆಎ 28 ಎ 7348 ಅಪಘಾತಪಡಿಸಿದ ಮೋಟಾರ್ ಸೈಕಲ್ ಸಂಖ್ಯೆ. ಎಂ ಹೆಚ್ 07 ಬಿ 0595 ಅಂತ ಇರುತ್ತದೆ. ನನ್ನ ಗಂಡನ ತಲೆಗೆ, ಮೊಳಕಾಲಿಗೆ ತೀವ್ರ ಸ್ವರೂಪದ ಗಾಯಗಳು ಆಗಿದ್ದವು ಎಂದರೆ ನಿಜ. ದಿ.30.07.2019 ರಂದು ದೇವರ ಹಿಪ್ಪರಗಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆ ಎಂದರೆ ನಿಜ. ಚಾಸಾ-2 ಕೂಡ ಪಂಚನಾಮೆ ಸಮಯಕ್ಕೆ ಹಾಜರು ಇದ್ದರು ಎಂದರೆ ನಿಜ. ಆರೋಪಿತನ ಪೂರ್ತಿ ರಿಯಾಜ್ ದಾವಲಸಾಬ ತಾಳಿಕೋಟಿ ಅಂತಾ ಇರುತ್ತದೆ ಎಂದರೆ ನಿಜ.

<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದ</u>

ನಾನು ಬಾಂಡೆ ವ್ಯಾಪಾರ ಮಾಡುತ್ತೇನೆ. ಚಾಸಾ-4, ನಾನು, ನನ್ನ ಮೃತ ಗಂಡ ಮತ್ತು ಮಕ್ಕಳೊಂದಿಗೆ ದೇವಾಸ್ಥಾನಕ್ಕೆ ಹೋಗಿದ್ದೆವು. ದೂರನ್ನು ಮನೋಹರ ಕಾಂಬಳೆ ಅನ್ನುವವರು

ಬರೆದಿರುತ್ತಾರೆ. ಇನ್ನೊಬ್ಬರು  ಹೆಸರು ನನಗೆ ನೆನಪಿಗೆ ಬರುತ್ತಿಲ್ಲ. ಮನೋಹರ ಕಾಂಬಳೆ ಮತ್ತು ಇನ್ನೊಬ್ಬರು  ಸೇರಿ ದೂರು ಕೊಟ್ಟಿರುತ್ತಾರೆ. ದೂರು ಬರೆದ ನಂತರ ಸಹಿ ಹಾಕಿರುತ್ತೇನೆ. ಸಹಿಯನ್ನು  ಸಿಂದಗಿ ಮನೆಯಲ್ಲಿ ಮತ್ತು ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಮನೋಹರ ಕಾಂಬಳೆ ಈತನಿಗೆ ಬರೆಯಲು ಪೊಲೀಸರು ಮಾಹಿತಿ ನೀಡಿರುತ್ತಾರೆ.  ಚಾಸಾ-4 ಮತ್ತು ನನ್ನ ಗಂಡ ಸಾರಾಯಿ ಕುಡಿದಿದ್ದರು ಎಂದರೆ ಸರಿಯಲ್ಲ. ನನ್ನ ಗಂಡನ ಶವ ಬೆಳಿಗ್ಗೆ ನೀಡಿರುತ್ತಾರೆ. ನಾನು 3 ಗಂಟೆಯವರೆಗೆ ಅಲ್ಲೇ ಇದ್ದೆ.

ರಾತ್ರಿ 11.30 ಆಗಿದ್ದರಿಂದ ಆಗ ಕತ್ತಲೆ ಆವರಿಸಿತ್ತು ಅಂದರೆ ನಿಜ. ನಮ್ಮ ವಾಹನಕ್ಕೆ ಇಂಡಿಕೇಟರ್ ಹಾಕದೆ ನಿಲ್ಲಿಸಿದ್ದರು ಎಂದರೆ ಸರಿಯಲ್ಲ. ಘಟನೆ ಆದಾಗ ನನ್ನ ವಾಹನದ ಒಳಗೆ ಇದ್ದೆ. ಗಾಡಿಯ ತಾಡಪತ್ರಿ ಮುಚ್ಚಿ ರುವ ಕಾರಣ ಹೊರಗಿನದು ಕಂಡು ಬರುವುದಿಲ್ಲ ಎಂದರೆ ನಿಜ. ಚಾಸಾ-4 ನನ್ನ ಸಂಬಂಧಿ ಅನ್ನುವ ಕಾರಣಕ್ಕೆ ಆತನ ವಿರುದ್ದ ದೂರು ಕೊಡದೆ ಆರೋಪಿತನ ವಿರುದ್ದ ದೂರು ಕೊಟ್ಟಿರುತ್ತೇವೆ ಎಂದರೆ ನಿಜ. ವಿಮಾ ಪರಿಹಾರಕ್ಕಾಗಿ ಆರೋಪಿತನ ವಿರುದ್ದ ದೂರು ದಾಖಲಿಸಿರುತ್ತೇನೆ ಎಂದರೆ ನಿಜ. ಆರೋಪಿತ ನ ವಿರುದ್ದ ಯಾವುದೇ ತಪ್ಪಿಲ್ಲದಿದ್ದರೂ ಆತನ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳದ ಚಕಬಂದಿ ನನಗೆ ಗೊತ್ತಿಲ್ಲ ಕಾರಣ ಘಟನೆ ಆದ ನಂತರ ನಾವೆಲ್ಲ ಅಳುತ್ತಾ ನಿಂತಿದ್ದೆವು. ಅಪಘಾತದಿಂದ ಆರೋಪಿಗು ಗಾಯ ಆಗಿತ್ತು ಎಂದರೆ ನಿಜ.

ಚಾಸಾ-4 ರವರು ತಮ್ಮ ವಾಹನ ನಿಸ್ಕಾಳಜಿತನದಿಂದ ನಿಲ್ಲಿಸಿದ್ದರಿಂದ ಆರೋಪಿ ಅಪಘಾತಪಡಿಸಿ ತನಗು ಗಾಯ ಮಾಡಿಕೊಂಡಿದ್ದ ಎಂದರೆ ಸರಿ. ಸಾಕ್ಷಿ ಮುಂದುವರೆದು ಅಪಘಾತ ಆರೋಪಿತನ ತಪ್ಪಿ ನಿಂದ ಆಗಿದೆ ಎಂದು ಹೇಳುತ್ತಾರೆ. ವಿಮಾ ಪರಿಹಾರಕ್ಕಾಗಿ ಆರೋಪಿತನ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನ ಯಾವುದೇ ತಪ್ಪು ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲಾ

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಸಿಂದಗಿ